ದಯವಿಟ್ಟು ಮಾನ್ಯ ಸಭಾಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು. ಅಸಿಸ್ಟೆಂಟ್ ಕಮೀಷನರ್ ಪಿ.ಕೆ. ಸುಬ್ಬಯ್ಯ, ಕುಂದಾಪುರದ ತಹಶೀಲ್ದಾರ್ ಜನಾರ್ದನ್ ಹಾಗೂ ಡೆಪ್ಯುಟಿ ತಹಶೀಲ್ದಾರ್ ಶ್ರೀನಿವಾಸ ಈ ಮೂವರ ಮೇಲೆ ನಾನು ಹಕ್ಕು ಚ್ಯುತಿ ತರುತ್ತಿದ್ದೇನೆ. ನಾವು ಕರ್ತವ್ಯದ ದೃಷ್ಟಿಯಿಂದ ಯಾರೋ ಒಬ್ಬರು ಬಡವರ ಮನೆ ಕಿತ್ತು ಹೋಗಿದೆ ಎಂದು ಹೇಳಿ ಹೋದವರು, ನಮ್ಮನ್ನು ಮೂರುವರೆ ಗಂಟೆಯಿಂದ ಹನ್ನೊಂದು ಮುಕ್ಕಾಲು ಗಂಟೆಯತನಕ ಕಾಯಿಸಿ ಸಮಸ್ಯೆ ಬಗೆಹರಿಯುವುದಕ್ಕೆ ಬಿಡದೇ ಅವರು ಅಲ್ಲಿ ರಾಜಕೀಯ ಮಾಡಿ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕಂದಾಯ ನೌಕರರು ಪೆನ್-ಡೌನ್ ಚಳುವಳಿ ಮಾಡಿದ್ದಾರೆ. ಅದರ ಮೇಲೆ ರಾಜ್ಯ ಸರ್ಕಾರಿ ನೌಕರರೂ ಸಹ ಮುಷ್ಕರ ಮಾಡಿದ್ದಾರೆ. ಇದಕ್ಕೆ ಸೂಕ್ತವಾದ ಪ್ರತಿಭಟನೆ ಮಾಡಲಿಕ್ಕೆ ನಮಗೂ ಹಕ್ಕು ಇದೆ. ದಯವಿಟ್ಟು ಸರ್ಕಾರ ಶಾಸಕರಿಗೆ ಆದಂತಹ ಅನ್ಯಾಯ, ಅವಮಾನ, ಅಪಪ್ರಚಾರಗಳಿಗೆ ತಡೆ ಒಡ್ಡಿ ಇದರ ಬಗ್ಗೆ ತನಿಖೆ ಮಾಡಬೇಕು ಹಾಗೂ ಆ ಸಂಬಂಧಪಟ್ಟ ಮೂವರು ಅಧಿಕಾರಿಗಳನ್ನು ತಕ್ಷಣದಿಂದ ಸೇವೆಯಿಂದ ಅಮಾನತ್ತುಗೊಳಿಸಬೇಕು ಎಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಸದಾನಂದಗೌಡರು, ನಿಮಗೆ ಮಾತನಾಡಲು ನಾನು ಅವಕಾಶವನ್ನು ಕೊಡುವುದಿಲ್ಲ. ನೀವು ಮಾತನಾಡಬೇಕೆಂದಿರುವುದು ಸೇಮ್ ಪ್ರಾಬ್ಲಂ ಬಗ್ಗೆ ಅಲ್ಲವೇ? ಎಷ್ಟು ಜನ ಅದೇ ವಿಚಾರದ ಮೇಲೆ ಮಾತನಾಡಬೇಕು ಹೇಳಿ. ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ತಾವು ಮಾತನಾಡಬೇಕೆಂದು ಹೇಳಿ ಈಗಾಗಲೇ ನನ್ನ ಹತ್ತಿರ ಅನುಮತಿ ಪಡೆದುಕೊಂಡಿದ್ದಾರೆ. ಕಳೆದ ಮೂರು ದಿನದಿಂದ ಅವರಿಗೆ ಮಾಡನಾಡಲು ಅವಕಾಶ ಸಿಕ್ಕಿಲ್ಲ. ಈಗ ದಯವಿಟ್ಟು ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ಮಾತನಾಡಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರ ವಿಶ್ವಾಸವನ್ನು ಗಳಿಸಲಿಕ್ಕೆ ಆಗದೇ ಇರತಕ್ಕಂತಹ ವಿರೋಧ ಪಕ್ಷದ ನಾಯಕರಿಂದ ಇವತ್ತು ಅವಿಶ್ವಾಸ ನಿರ್ಣಯ ಮಂಡನೆಯಾಗಿದೆ.

ಅಧ್ಯಕ್ಷರು : ಭಾಷಣ ಮಾಡಲಿಕ್ಕೆ ಇಲ್ಲಿ ಅವಕಾಶ ಇಲ್ಲ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಮೂರು ದಿವಸಗಳಿಂದ ನನಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರೆಂದು ಕಾಯುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಡಬೇಕೆಂದು ನಾನು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆನು. ಕೆಲವರು ಗಂಟೆಗಟ್ಟಲಿ ಮಾತನಾಡುತ್ತಾರೆ, ನಮ್ಮ ಕ್ಷೇತ್ರ, ನಮ್ಮ ರಾಜ್ಯ, ನಮ್ಮ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಮಾತನಾಡಲಿಕ್ಕೆ ಆಗದಿದ್ದರೆ ನಾನು ಏಕೆ ಈ ಸದನದಲ್ಲಿ ಇರಬೇಕು. ನಾನು ಪಲಾಯನವಾದಿ ಅಲ್ಲ, ನೀವು ಬೇಕಾದರೆ ನನ್ನನ್ನು ಹೊರಗಡೆ ಹಾಕಿ ತಮ್ಮ ಕೆಲಸವನ್ನು ಮುಂದುವರೆಸಬಹುದು.

ಅಧ್ಯಕ್ಷರು : ನೀವು ಸ್ವಲ್ಪ ನಿಮ್ಮ ಸದಸ್ಯರಿಗೆ ಗೈಡ್ ಮಾಡಬೇಕಾಗುತ್ತದೆ. I am giving him an opportunity to make a reference to his problem. He cannot convert it into an opportunity to deliver a speech.

(3) ಕುಂದಾಪುರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಕೊಲೆ.

+ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ನಡೆದಂತಹ ಘಟನೆ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಸಭಾಪತಿಯವರು ಮಾತನಾಡಿದ್ದಾರೆ. ಕಂದಾಯ ಇಲಾಖೆಯ ನೌಕರರ ಮುಷ್ಕರ ನಡೆಯುತ್ತಿದೆ, ಪೆನ್ ಡೌನ್ ಸ್ಟ್ರೈಕ್ ನಡೆಯುತ್ತಿದೆ, ಕೆಲಸಗಳು ಯಾವುವೂ ಅಲ್ಲಿ ಆಗುತ್ತಿಲ್ಲ. ಈ ಸಂದರ್ಭದಲ್ಲಿ ನಮ್ಮ ಕ್ಷೇತ್ರದಲ್ಲಿ ನಡೆದಿರತಕ್ಕಂತಹ ಕೊಲೆಯ ಬಗ್ಗೆ ಹೇಳಬೇಕಾಗಿದೆ. ದಿನಾಂಕ 30.3.95ರಂದು ನಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ

ಕಾರ್ಯಕರ್ತನೊಬ್ಬನ ಕೊಲೆಯಾಯಿತು. ಈ ಕೊಲೆಯ ಬಗ್ಗೆ ನಾನು ಈ ವಿಧಾನ ಸಭೆಯಲ್ಲಿ ಸಹ ಪ್ರಸ್ತಾಪ ಮಾಡಿದ್ದೇನೆ. ಈ ಬಗ್ಗೆ ಮುಖ್ಯಮಂತ್ರಿಗಳನ್ನೂ ಸಹ ಭೇಟಿಯಾಗಿದ್ದೇನೆ. ಈ ಬಗ್ಗೆ ಗೃಹ ಸಚಿವರನ್ನೂ ಸಹ ಭೇಟಿಯಾಗಿದ್ದೇನೆ. ಆದರೆ ಅವರು ಕೊಟ್ಟಿರತಕ್ಕ ಆಶ್ವಾಸನೆ ಏನು ಎಂದು ಹೇಳಿದರೆ, ನಾವು ಸಿ.ಬಿ.ಐ. ತನಿಖೆ ಮಾಡಿಸುತ್ತೇವೆ, ಆದಾಗದಿದ್ದರೆ ಸಿಓಡಿ ತನಿಖೆ ಮಾಡಿಸುತ್ತೇವೆಂದು ಅವರು ಹೇಳಿದ್ದಾರೆ. ಬಹುಶಃ ನಾನು ಸಿಓಡಿ ತನಿಖೆಗೆ ಕೇಳಿರಲಿಲ್ಲ. ಏಕೆ ಈ ವಿಚಾರವನ್ನು ನಾನು ನಿಮಗೆ ಹೇಳುತ್ತಿದ್ದೇನೆ ಎಂದರೆ, ಕೊಲೆಯಾದ ಒಂದು ತಿಂಗಳ ಮೊದಲೇ, ಕೊಲೆಯಾದ ವ್ಯಕ್ತಿ ನನ್ನ ಕೊಲೆಯಾಗುತ್ತದೆ, ನನಗೆ ರಕ್ಷಣೆಯನ್ನು ಕೊಡಿ ಎನ್ನತಕ್ಕಂತಹ ದೂರನ್ನು ಸರ್ಕಲ್ ಇನ್ಸ್‌ಪೆಕ್ಟರವರಿಗೆ ಸಲ್ಲಿಸಿದ್ದರೂ ಸಹ, ಕೊಲೆಯ ತನಿಖೆಯ ಪ್ರಕ್ರಿಯೆಯನ್ನು ಪೂರ್ಣ ಮಾಡದೇ ಕೊಲೆಯಾದಂತಹ ಸಂದರ್ಭದಲ್ಲಿ ಕಿಸೆಯಲ್ಲಿ, ಅರ್ಜಿ ಕೊಟ್ಟಂತಹ ಸ್ವೀಕೃತ ಪತ್ರವನ್ನು ಮತ್ತು ದೂರಿನ ನಕಲುಗಳಿದ್ದರೂ ಸಹ ಒಂದು ತಿಂಗಳು ನಾವು ಕಾದೆವು. ಕೊಲೆಗಾರರನ್ನು ಇವರು ಹಿಡಿಯಬಹುದು ಎನ್ನತಕ್ಕಂತಹ ಉದ್ದೇಶದಿಂದ. ಆದರೆ ಯಾರನ್ನೂ ಸಹ ಹಿಡಿಯಲಿಲ್ಲ. ದಿನಾಂಕ 29.4.95 ರಂದು ನಾವು ಧರಣಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದೆವು. ಬಹಳಷ್ಟು ಸದವಕಾಶವನ್ನು ಆಡಳಿತ ಮಾಡತಕ್ಕಂತಹ ಪಕ್ಷದವರಿಗೆ ಕೊಟ್ಟಿದ್ದರೂ, ಅವರು ಏನೂ ಕ್ರಮ ಕೈಗೊಳ್ಳಲಿಲ್ಲ. 50 ದಿನಗಳ ಕಾಲ ಪ್ರತಿ ಗ್ರಾಮದಿಂದ ನಾಗರೀಕರು ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಈ ಧರಣಿಯಲ್ಲಿ ಭಾಗವಹಿಸಿದ್ದರೂ, ಇನ್ನೂ ಕೊಲೆಗಾರನ ಬಂಧನವಾಗಿರುವುದಿಲ್ಲ. ಯಾರೂ ಕೂಡ ನ್ಯಾಯವನ್ನು ಕೊಡಿಸುತ್ತೇವೆ ಎನ್ನತಕ್ಕಂತಹ ಒಂದು ಆಶ್ವಾಸನೆಯನ್ನೂ ಕೊಟ್ಟಿಲ್ಲ. ಯಾರೂ ಸಹ ವಿಶ್ವಾಸವನ್ನು ಮೂಡಿಸತಕ್ಕಂತಹ ಒಂದೇ ಆಶ್ವಾಸನೆಯನ್ನೂ ಕೊಟ್ಟಿಲ್ಲ. ಯಾರೂ ಸಹ ವಿಶ್ವಾಸವನ್ನು ಮೂಡಿಸತಕ್ಕಂತಹ ಒಂದೇ ಒಂದು ಮಾತನ್ನು ಆಡಿಲ್ಲ. ಅನಂತರ ದಿನಾಂಕ 18.6.96ರಿಂದ ನಾವು ಸರದಿ ಉಪವಾಸ ಸತ್ಯಾಗ್ರಹ ಮಾಡಿದೆವು. ಪ್ರತಿ ದಿವಸ ಸರ್ಕಾರಕ್ಕೆ ಮನವಿಯನ್ನು ಕಳುಹಿಸಿದೆವು. ತಂತಿಯನ್ನೂ ಸಹ ಕಳುಹಿಸಿದೆವು. ಆದರೆ ಯಾವುದಕ್ಕೂ ಸರ್ಕಾರದಿಂದ ಉತ್ತರ ಇಲ್ಲ. ನಾನು ಇರುವ ವಿಚಾರವನ್ನು ಹೇಳುತ್ತಿದ್ದೇನೆ. ನಾನು ಹೇಳದೇ ನಿಮಗೆ ವಿಷಯದ ಗಂಭೀರತೆ ಹೇಗೆ ಅರ್ಥವಾಗುತ್ತದೆ. ಅದು 100 ದಿವಸ ಆಯಿತೋ, 200 ದಿವಸ ಆಯಿತೋ, ಕೊಲೆ ಆಯಿತೋ ಏನಾಯಿತೋ ಎಂಬ ವಿಚಾರಗಳನ್ನು ....

ಅಧ್ಯಕ್ಷರು : ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಇದೊಂದು ಪೂರ್ವ ನಿಯೋಜಿತವಾದ ಕೊಲೆಯಾಗಿದೆ. ಕೊಲೆಯ ತನಿಖೆಯ ಪ್ರಕ್ರಿಯೆ ಇನ್ನೂ ಆಗಿಲ್ಲ. ಕೊಲೆಗಾರನ ಬಂಧನ ಆಗಿಲ್ಲ.

ಅಧ್ಯಕ್ಷರು : ಪಾರ್ಟಿ ಲೀಡರ್ಸ್‌ಗಳೂ ಕೂಡ ಪಾರ್ಟಿ ಮೆಂಬರ್ಸ್‌ಗೆ ಹೀಗೆ ಮಾತನಾಡಬೇಕು ಎಂಬ ಬಗ್ಗೆ ಟ್ರೈನಿಂಗ್ ಕೊಡುವುದಿಲ್ಲ, ಮೆಂಬರ್ಸ್‌ಗಳಿಗೂ ಸಹ ಸ್ವತಃ ಟ್ರೈನಿಂಗ್ ಇರುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಪೋಲೀಸರ ದ್ವಂದ್ವ ನೀತಿಯನ್ನು ನಾನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ನಾವು ಸತ್ಯಾಗ್ರಹಿಗಳು ಒಂದು 30 ದಿವಸ ಧರಣಿಯನ್ನು, ಉಪವಾಸ ಸತ್ಯಾಗ್ರಹವನ್ನು ಮಾಡಿದರೆ ಧರಣಿಯ ಚಪ್ಪರಕ್ಕೆ ಬೆಂಕಿ ಹಾಕಲಾಯಿತು. ಕಲ್ಲು ತೂರಾಟ ಮಾಡಲಾಯಿತು. ಕಿರುಕುಳ ಕೊಡಲಾಯಿತು. ಇಷ್ಟು ಪ್ರಕರಣಗಳ ಬಗ್ಗೆ ಕೇಸು ದಾಖಲೆ ಮಾಡಿದ್ದಾರೆ. ನಿರೀಕ್ಷಣಾ ಜಾಮೀನು ಪಡೆದಂತಹವರು ಪಡೆದುಕೊಂಡು

ಹೋಗತಕ್ಕಂತಹ ಸಂದರ್ಭದಲ್ಲಿ, ಈ ಸತ್ಯಾಗ್ರಹಿಗಳ ಚಪ್ಪರಕ್ಕೆ ಕಲ್ಲು ತೂರಾಟವನ್ನು ಮಾಡಿದರು, ಪಟಾಕಿ ಹಚ್ಚಿದರು. ಬಹುಶಃ ಈ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬಹುದು.

ಅಧ್ಯಕ್ಷರು : ದೇವರೇ ನಮ್ಮನ್ನು ಕಾಪಾಡಬೇಕು ಅಷ್ಟೇಯ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾವು ಈ ಒಂದು ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒತ್ತಾಯಿಸುತ್ತಿದ್ದೇವೆ. ಏಕೆ ಒತ್ತಾಯಿಸುತ್ತಿದ್ದೇನೆ ಎಂದರೆ ಕಳೆದ ಒಂದು ತಿಂಗಳಿನಿಂದ ಕುಂದಾಪುರ ಕ್ಷೇತ್ರದಲ್ಲಿ ನಡೆದಂತಹ ಸುಮಾರು ಏಳು ಕೊಲೆಗಳು ಸಿ.ಒ.ಡಿ.ಗೆ ವಹಿಸಲಾಗಿದೆ. ಆದರೆ ಯಾವುದೇ ಪ್ರಕರಣದಲ್ಲೂ ಇದುವರೆವಿಗೂ ಚಾರ್ಜ್‌ಶೀಟ್ ಹಾಕುವಲ್ಲಿ ಸರ್ಕಾರ ವಿಫಲಗೊಂಡಿದೆ. ಗಡಿಬಿಡಿಯಲ್ಲಿ ಈ ಪ್ರಕರಣದಲ್ಲಿ ಚಾರ್ಜ್‌ಶೀಟ್ ಹಾಕಿ ನನ್ನ ಬಾಯನ್ನು ಈ ಕೊಲೆಯ ಪ್ರಕರಣವನ್ನು ಮುಚ್ಚಿ ಹಾಕುವಂತಹ ಒಂದು ಪ್ರಯತ್ನ ನಡೆದಿದೆ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೇ. ಇದನ್ನು ಸಿ.ಬಿ.ಐ. ತನಿಖೆಗೆ ವಹಿಸಬೇಕು ಎನ್ನತಕ್ಕಂತಹ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಮತ್ತೊಂದು ವಿಚಾರವನ್ನು ಇಲ್ಲಿ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಊರಿಗೆ ಬಂದಿದ್ದರು.

ಅಧ್ಯಕ್ಷರು : ಆ ವಿಚಾರ ಈಗ ಬೇಡ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ಮಾತನಾಡಲು ಅವಕಾಶ ಕೋರಿದಾಗ ತಾವು ಅವಕಾಶ ಕೊಟ್ಟಿಲ್ಲ, ಇವತ್ತು ಮಾತನಾಡಲು ನಿಂತಿರುವಾಗ ಸಮಯವಾಗುತ್ತದೆ ಎಂದು ಹೇಳುತ್ತೀರಿ. ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ, ನನ್ನ ಗ್ರಾಮಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಾಗಿರುವಂತಹ ಶ್ರೀ ಯಡಿಯೂರಪ್ಪನವರು ಬಂದಿದ್ದರು. ಅವರು ಬಂದದು ಒಂದು ಭಾಷಣ ಮಾಡಿ ಹೋಗಿದ್ದಾರೆ. ಕುಂದಾಪುರ ತಾಲ್ಲೂಕು ಬೆಳವಿಯಲ್ಲಿ ನಡೆದ ಕೊಲೆ ಪ್ರಕರಣ ಒಂದಕ್ಕೆ ಸಂಬಂಧಿಸಿದಂತೆ ಬಿ.ಜೆ.ಪಿ.ಯವರ ನಿರಪರಾಧಿ ಕಾರ್ಯಕರ್ತರ ವಿರುದ್ಧ ಸುಳ್ಳು ಕೇಸ್ ಅನ್ನು ದಾಖಲು ಮಾಡಿದ್ದಾರೆ ಎನ್ನತಕ್ಕಂತಹ ಒಂದು ಭಾಷಣವನ್ನು ಅವರು ಅಲಲ್ಲಿ ಮಾಡಿದರು. ಇವತ್ತು 'ಬೆಳವಿ ಕೊಲೆಗೆ ಬಿ.ಜೆ.ಪಿ. ನಾಯಕ ತಾರಾನಾಥ ಶೆಟ್ಟಿ ಅವರ ಬಂಧನ' ಎನ್ನತಕ್ಕಂಥಾದ್ದು ಬಂದಿದೆ. ಕೋಳಿ ಫಯಾಜ್ನ ಅಂತ್ಯ ಸಂಸ್ಕಾರಕ್ಕೆ ಭೇಟಿ ಕೊಟ್ಟಂತಹ ಮಾನ್ಯ ಸಚಿವರಾದ ರೋಷನ್ಬೇಗ್ರವರ ರಾಜೀನಾಮೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ.

ಮಾನ್ಯ ಸಿಂಧ್ಯರವರ ರಾಜೀನಾಮೆಯನ್ನು ಕೇಳುತ್ತಿದ್ದಾರೆ, ಶ್ರೀ ಸಿ.ಎಂ. ಇಬ್ರಾಹಿಂರವರ ರಾಜೀನಾಮೆಯನ್ನು ಕೇಳುತ್ತಿದ್ದಾರೆ. ಈ ರೀತಿ ಮಾತನಾಡತಕ್ಕ ನೈತಿಕತೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇಲ್ಲ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ದಾಖಲೆಗಳ ಸಹಿತ ಮಾತನಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಪ್ರತಾಪಚಂದ್ರ ಶೆಟ್ಟಿಯವರೆ, ದಯಮಾಡಿ ಕುಳಿತುಕೊಳ್ಳಿ. *I am here.*

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನೂ ನಾಲ್ಕನೇಯ ಬಾರಿಗೆ ಆಯ್ಕೆಯಾಗಿದ್ದೇನೆ. ಯಡಿಯೂರಪ್ಪನವರೂ ನಾಲ್ಕನೇ ಬಾರಿಗೆ ಆಯ್ಕೆಯಾಗಿದ್ದಾರೆ. ಈಗೇನೂ ಅವರು ಸ್ವಲ್ಪ ಕೋಡು ಬೆಳಿಸಿಕೊಂಡು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಕುಳಿತಿರಬಹುದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ಅವರು ಹೇಳಲು ಅವಕಾಶ ಕೊಡಿ. ನಂತರ ಅವರು ಅದನ್ನು ನಿರಾಕರಿಸಲಿ.

(ಗೊಂದಲ)

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೇ, ಈ ಸದನ ಯಾರೊಬ್ಬರ ಸೊತ್ತಲ್ಲ. ಎಲ್ಲರೂ ಮಾತನಾಡುವಂತಹ ಹಕ್ಕು ಇದೆ. ಯಾರೂ ಅಡ್ಡಿ ಮಾಡಲಿಕ್ಕೆ ಹಕ್ಕು ಇಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರು ಸಭಾಧ್ಯಕ್ಷರ ಮುಂದಿರುವ ಸದನದ ಬಾವಿಯಲ್ಲಿ ಬಂದು ನಿಂತರು.)

(ಗೊಂದಲ)

ಅಧ್ಯಕ್ಷರು : ಪ್ರತಾಪಚಂದ್ರ ಶೆಟ್ಟಿಯವರೇ, ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹಿಂದುರುಗಿ, ತಾವು ಈ ಸದನದ ಹಿರಿಯ ಸದಸ್ಯರಿದ್ದೀರಿ, ನಾಲ್ಕನೇ ಬಾರಿಗೆ ಆಯ್ಕೆಯಾಗಿ ಬಂದಿದ್ದೀರಿ; ತಾವು ಹೇಳಬೇಕಾದ್ದನ್ನೆಲ್ಲಾ ಹೇಳಿದ್ದೀರಿ, ದಯಮಾಡಿ ತಮ್ಮ ಸ್ಥಾನಕ್ಕೆ ತೆರಳಿ. ಐ.ಎಂ. ಜಯರಾಮ ಶೆಟ್ಟಿಯವರೆ ಮಾತನಾಡಿ.

(ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಮುಖ್ಯ ಉದ್ದೇಶವೇನೆಂದರೆ, ಆ ಒಂದು ಕೊಲೆ ಪ್ರಕರಣದಲ್ಲಿ ಭಾಗಿಯಾದಂತಹ ಕೆಲವು ಜನ ಏನಿದ್ದಾರೆ ಅವರ ಮೇಲೆ ಚಾರ್ಜ್‌ಶೀಟ್ ಹಾಕದೆ, ಅವರನ್ನು ಬಂಧನದಲ್ಲಿ ಇಡದೆ ಫ್ರೀಯಾಗಿ ಬಿಟ್ಟಿದ್ದಾರೆ, ಅದಕ್ಕಾಗಿ ಇದರ ಬಗ್ಗೆ ಸಿ.ಇ.ಬಿ. ತನಿಖೆಯನ್ನು ಮಾಡಿಸಬೇಕು, ಸಿ.ಓ.ಡಿ. ತನಿಖೆ ಮಾಡಿಸಿದರೂ ಕೂಡ ಅವರ ಕೈನಿಂದಲೂ ಕೂಡ ತಪ್ಪಿ ಹೋಗಿದೆ. ಆ ಜನರಿಗೆ ಅವರನ್ನು ಹಿಡಿಯುವುದಕ್ಕೆ ಆಗಿಲ್ಲ. ಏತಕ್ಕೆಂದರೆ, ಅನೇಕ ರಾಜಕೀಯ ಪ್ರಭಾವಗಳು ಪ್ರಭಾವವನ್ನು ಬೀರಿ ಆ ಜನರಿಗೆ ಕಾನೂನು ಚೌಕಟ್ಟಿನಲ್ಲಿ ತಂದು ಅವರಿಗೆ ಚಾರ್ಜ್ ಶೀಟ್ ಹಾಕಿ ಅಥವಾ ಈ ಒಂದು ಪ್ರಕರಣದಲ್ಲಿ ಅಕ್ಯೂಸ್ಡ್ ಮಾಡುವುದಕ್ಕಾಗುತ್ತಿಲ್ಲ. ಅದಕ್ಕಾಗಿ ಅಂತಹವರಿಗೆ ರಕ್ಷಣೆಯನ್ನು ಮುಖಂಡರು ಕೊಡುತ್ತಾ ಇದ್ದಾರೆ. ಬಹುಶಃ ವಿರೋಧಪಕ್ಷದ ನಾಯಕರು ಅಲ್ಲಿ ಹೋಗಿದ್ದರು ಎನ್ನತಕ್ಕಂತಹ ಮಾತನ್ನು ಕೂಡ ಅವರು ಹೇಳುತ್ತಿದ್ದಾರೆ. ಅದಕ್ಕೆ ಈ ಮಾತು ಸ್ವಲ್ಪ ಸ್ಪಷ್ಟವಾಗಲಿ. ಇದು ಅವರ ಮತಕ್ಷೇತ್ರ. ಅವರ ಊರ....

ಅಧ್ಯಕ್ಷರು : ಆಯಿತಲ್ಲ, ನೀವೇ ಹೇಳಿಬಿಟ್ಟರಲ್ಲಾ? ಗಮನಕ್ಕೆ ತರುವುದನ್ನೆಲ್ಲಾ ತಂದಿದ್ದಾರೆ, ಇನ್ನು ಕೇಳುವುದಕ್ಕೆಲ್ಲಾ ಜಗಳಕ್ಕೆ. ದಯಮಾಡಿ ಸಹಕರಿಸಿ, ಎಲ್ಲಾ ಹೇಳಿದ್ದೀರಲ್ಲಾ. ಸಿ.ಬಿ.ಐ. ತನಿಖೆ ಆಗಬೇಕೆಂದೆಲ್ಲಾ ಹೇಳಿದ್ದೀರಿ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಯಡಿಯೂರಪ್ಪನವರಿಗೆ ಯಾರದೇ ರಾಜೀನಾಮೆ ಕೇಳತಕ್ಕಂಹ ನೈತಿಕ ಹಕ್ಕಿಲ್ಲ, ಏಕೆಂದರೆ ಅವರು ರಾಜೀನಾಮೆಯನ್ನು ಕೇಳಬೇಕಾದರೆ, ಏತಕ್ಕೆಂದರೆ ಅವರು ರಾಜೀನಾಮೆಯನ್ನು ಕೇಳಬೇಕಾದರೆ ....

(ಗೊಂದಲ)

ಅಧ್ಯಕ್ಷರು ; ಯಾವುದನ್ನೂ ರೆಕಾರ್ಡ್ ಮಾಡಬೇಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಯಾವುದನ್ನೂ ರೆಕಾರ್ಡ್ ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅದಕ್ಕಾಗಿ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ. ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಕೇಳಿಕೊಳ್ಳತಕ್ಕಂತಹದ್ದು ಇಷ್ಟೆ. ಇದನ್ನು ಸಿ.ಓ.ಡಿ. ತನಿಖೆಯಿಂದ ತೆಗೆದು, ಸಿ.ಬಿ.ಐ.ಗೆ ಕೊಟ್ಟು ಬಿಡಲಿ. ಸಿ.ಬಿ.ಐ.ನಲ್ಲಿ ಯಾರ್ಯಾರು ಏನೇನು ಇದೆ ಎನ್ನತಕ್ಕಂತಹದ್ದು ಹೊರಗೆ ಬರುತ್ತದೆ. ಏಕೆಂದರೆ ಸಿ.ಓ.ಡಿ. ತನಿಖೆಯಲ್ಲಿ ಇವತ್ತು ಕೆಲವು ಕೈತಪ್ಪಿ ಹೋಗಿಬಿಟ್ಟು ಹೊರಗಡೆಗೆ ಬಂದಿದ್ದಾರೆ. ಏಕೆಂದರೆ ರಾಜಕೀಯ ಪ್ರಭಾವ, ಸ್ಥಳೀಯ ಅನೇಕ ಮುಖಂಡರು ಕೂಡ ಅನೇಕ ಪ್ರಭಾವ ಬೀರುತ್ತಿದ್ದಾರೆ, ಅದಕ್ಕಾಗಿ ದಯವಿಟ್ಟು ಇದನ್ನು ಮುಖ್ಯಮಂತ್ರಿಗಳು ಸಿ.ಬಿ.ಐ. ತನಿಖೆಗೆ ಒಪ್ಪಿಸಿಕೊಡಬೇಕು.

ಅಧ್ಯಕ್ಷರು : ಇದೇನಿದು, ಖರ್ಗೆಯವರೇ ನೀವೇ ಹೇಳಿ. ಸಭೆಯನ್ನು ಹೇಗೆ ನಡೆಸಬೇಕು ಇನು ಜಯರಾಂಶೆಟ್ಟರು ಏನೇನೂ ಹೇಳುವುದಿದೆ, ಮುಖ್ಯಮಂತ್ರಿಗಳು ....

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾವು ಯಾವುದೇ ರಾಜಕೀಯ ಮಾಡುತ್ತಿಲ್ಲ. ನಾವು ನ್ಯಾಯವನ್ನು ಕೇಳಲಿಕ್ಕೆ, ಇವತ್ತು ಕರ್ನಾಟಕದಲ್ಲಿ 130 ದಿವಸದಿಂದ ಸತ್ಯಾಗ್ರಹ ಮಾಡುತ್ತಿದ್ದೇವೆ. ನಮಗೆ ಯಾವುದೇ ರಾಜಕೀಯ ಬೇಕಾಗಿಲ್ಲ.

(ಗೊಂದಲ)

ಶ್ರೀ ಐ.ಎಂ. ಜಯರಾಮಶೆಟ್ಟಿ : ಮಾನ್ಯ ಸಭಾಧ್ಯಕ್ಷರೇ, 2.8.95ನೇ ಇಸವಿಯಲ್ಲಿ ಸಾಧಾರಣವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಒಂದು ತಿಂಗಳು. ಸಿಕ್ಕಾಪಟ್ಟೆ ಮಳೆ ಬರುವಂತಹ ತಿಂಗಳಾಗಿದೆ. ಇವತ್ತು ಮಧ್ಯಾಹ್ನ 12 ಗಂಟೆಗೆ ....

ಶ್ರೀ ಎಂ. ವಿ. ವೀರಪ್ಪ ಮೊಯಿಲಿ : ಸ್ವಲ್ಪ ಈಲ್ಡ್ ಆಗಬೇಕು.

ಅಧ್ಯಕ್ಷರು : ತಾವು ಸ್ವಲ್ಪ ತಡವಾಗಿ ಬಂದಿದ್ದೀರಿ ಎಂದು ಕಾಣುತ್ತದೆ. ಇವರು ಒಂದು ರೆಫರ್ ಮಾಡಿದ್ದಾರೆ, ಎಲ್ಲದಕ್ಕೂ ಒಟ್ಟಿಗೆ ಉತ್ತರ ಕೊಡಿಸಿಬಿಡುತ್ತೇನೆ. ಕ್ಲೋಸ್ ಮಾಡಿಸಿಬಿಡೋಣ.

ಶ್ರೀ ಎಂ.ವಿ. ವೀರಪ್ಪ ಮೊಯಿಲಿ : ಇಲ್ಲ ಇಲ್ಲ. ಅದಕ್ಕೂ ಇದಕ್ಕೂ ವ್ಯತ್ಯಾಸವಿದೆ.

ಅಧ್ಯಕ್ಷರು : ನೀವು ತಡವಾಗಿ ಬಂದಿರಿ. ನನಗೆ ಅದು ಗೊತ್ತಿದೆ. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಭಾಪತಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರತಾಪಚಂದ್ರ ಶೆಟ್ಟಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟುಬಿಡುತ್ತಿದ್ದೇನೆ.

SRI VEERAPPA MOILY : No no, I am not coming on the way. ಸನ್ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಹೇಳಿದಂಥ ವಿಚಾರವೇನೆಂದರೆ, ಒಂದು ಕೊಲೆಗೆ ಸಂಬಂಧಪಟ್ಟಂಥ ವಿಚಾರ. ಅದರಲ್ಲಿ ಏನಾಗಿದೆ ಎಂದರೆ, ಕೊಲೆಯಾದವನ ಮನೆಗೆ ನಾನು ಕೂಡ ಹೋಗಿದ್ದೆ. ಬಹಳ ಅಮಾನುಷವಾದ ರೀತಿಯಲ್ಲಿ ಆ ಹುಡುಗನ ಕೊಲೆಯಾಗಿದೆ. ಕೊಲೆಯಾದವನ ಮೇಲಾದರೂ ಮರುಕವಿರಬೇಕು. ಇದು ರಾಜಕೀಯವಲ್ಲ. ಆ ಯುವಕ ಯುವ ಕಾಂಗ್ರೆಸ್ಸಿಗೆ ಸೇರಿದ ಒಬ್ಬ ತರುಣ. ಕೊಲೆಯಾದವನ ಬಗ್ಗೆ ಮಾತನಾಡಬಾರದೆಂದು ಇಲ್ಲಿ ವಿರೋಧ ಪಕ್ಷದ ನಾಯಕರು ಹೇಳುವುದಾದರೆ .....

(ಗೊಂದಲ)

ಆದರೆ ವಿರೋಧ ಪಕ್ಷದ ನಾಯಕರು ಆ ಸ್ಥಳಕ್ಕೆ ಹೋಗಿ, ಕೊಲೆ ಮಾಡಿದವರು ಕೊಲೆಗಾರ ಅಲ್ಲ ಎಂದು ಹೇಳತಕ್ಕ ಪ್ರಮಾಣಪತ್ರ ಕೊಡುವುದಿದ್ದರೆ, ಯಾವ ಸಿ.ಒ.ಡಿ. ತನಿಖೆ ....

(ಗೊಂದಲ)

SRI M. VEERAPPA MOILY : Please go through he press statement. How can the Leader of the Opposition say that he is not the accussed. He is abetting an offence.

(INTERRUPTION)

ಶ್ರೀ ಎಂ. ಶ್ರೀನಿವಾಸ್ : ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಇದೇ ಮೊಯಿಲಿಯವರು, ಅವರ ಸಂಪುಟದಲ್ಲಿ ಕುಣಿಗಲ್ ಪ್ರಕರಣದಲ್ಲಿ ಕೊಲೆಗಾರರಲ್ಲ ಎಂದು ಅವರೇ ಹೇಳಿದರು. ಮತ್ತೆ ಅವರು ಏನು ಮಾಡಿದರು. ಇವನು ಕೊಲೆ ಆಪಾದಿತ ಎಂದು ಹೇಳಿ ಅವರೇ ಸಚಿವ ಸಂಪುಟದಲ್ಲಿ ವಜಾ ಮಾಡಬೇಕೆಂದು ಹೇಳಿದರು.

(ಗೊಂದಲ)

ದ.ಕ. ಜಿಲ್ಲೆಯಲ್ಲಿ ಅಂಗವಿಕಲ ಹೆಣ್ಣು ಮಗಳ ಮನೆ ನೆಲಸಮ

ಶ್ರೀ ಐ.ಎಂ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ದ.ಕ. ಜಿಲ್ಲೆಯಲ್ಲಿ ಅಂಗವಿಕಲ ಹೆಣ್ಣು ಮಗಳ ಮನೆ ನೆಲಸಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2.8.1995ರಂದು ಧಾರಾಕಾರವಾಗಿ ಮಳೆ ಬರುವಾಗ ಮಧ್ಯಾಹ್ನ 12 ಗಂಟೆಗೆ ಉಪ ತಹಸೀಲ್ದಾರರು ಸುಂದರ ಶೆಟ್ಟಿ ಮತ್ತು ಶಿಬಿರ ಸಾಹೇಬರು ಮತ್ತೊಂದು ಐದಾರೇಳಿಂಟು ಜನ ಬಂದು ಒಂದು ಮುಗ್ಧ ಹೆಂಗಸು ಅಂಗವಿಕಲರ ಮಗಳನ್ನು ಕಾರ್ಡು ಹೊಂದಿದ ಸುಮಾರು ನಾಲ್ಕು ವರ್ಷದಿಂದ 127-1(ಎ) ನಲ್ಲಿ ವಾಸಿಸುತ್ತಿದ್ದ ಮನೆಯನ್ನು ದಿಡೀರಾಗಿ ನೆಲ ಸಮ ಮಾಡಿ ಅವರು ಅಡಿಗೆ ಮಾಡುವ ಸಾಮನು ಪಾತ್ರೆ ಬಟ್ಟೆ ಎಲ್ಲವನ್ನೂ ತೆಗೆದುಕೊಂಡು ಅವರದೇ ಅದ ಒಂದು ಲಾರಿಯಿಂದ ತಾಲ್ಲೂಕು ಆಫೀಸ್‌ಗೆ ಸಾಗಿಸಿದರು, ಈ ಸ್ಥಿತಿಯಲ್ಲಿ ಆ ಹೆಂಗಸು ನನ್ನ ಹತ್ತಿರ ಬಂದಾಗ ನಾನು ತಾಲ್ಲೂಕು ಆಫೀಸ್ ಪಂಚಾಯತ್ ಮೇಲುಕಟ್ಟೆ ಆಫೀಸ್‌ಗೆ ಹೋದಾಗ ಅಲ್ಲಿ ಉಪತಹಸೀಲ್ದಾರರು ಇರಲಿಲ್ಲ. ಐದು ಗಂಟೆಗೆ ಉಪ ತಹಸೀಲ್ದಾರರು ಬಂದರು. ಅವರು ಬಂದಾಗ ವಿಷಯವನ್ನು ಕೇಳಿದಾಗ ಅವರು ಈ ವಿಷಯಕ್ಕೆ ನನಗೆ ಸರಿಯಾದ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಇದಕ್ಕೆ ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಕಮೀಷನರ್ ಬೇಕು ಎಂದರು. ನಾನು ಅವರನ್ನು ಕೇಳಿದೆ ನೀವು ಇದನ್ನು ಯಾವ ದೃಷ್ಟಿಯಿಂದ ಮಾಡಿದ್ದೀರಿ ಎಂದು. ಸಾರ್ವಜನಿಕ ಹಿತ ದೃಷ್ಟಿಯಿಂದ ಮಾಡಿದ್ದೀರೋ ಅಥವಾ ಕಾನೂನು ಪಾಲನೆಗೆ ಮಾಡಿದ್ದೀರೋ ಎಂದು ಕೇಳಿದಾಗ ಅವರು ಯಾವುದೇ ರಿಪೋರ್ಟನ್ನು ಪಂಚಿಯತ್‌ನಲ್ಲಿ ಕೊಡಲಿಕ್ಕೆ ಆಗಲಿಲ್ಲ. ಕೊನೆಗೆ ನಾನು ಹೇಳಿದ ಅವರು ಒಂದೂವರೆ ದಿವಸದಿಂದ ಮನೆ ಇಲ್ಲದೆ ಇದ್ದಾರೆ ಅಡಿಗೆ ಮಾಡದೆ ಇದ್ದಾರೆ 127 ಒಂದು (ಎ) ಮನೆ ಇದೆ. ಅದನ್ನು ನೀರು ರೇಕಾರ್ಡ್‌ನಲ್ಲಿ ತೋರಿಸಿ ವಾಸ್ತವಿಕವಾಗಿ ಎಂದು ಕೇಳಿದರೆ ಅವರಿಗೆ ತೋರಿಸಲಿಕ್ಕೆ ಆಗಲಿಲ್ಲ. ಕೊನೆಗೆ ನಾನು ಅವರಿಗೆ ಹೇಳಿದ ಅವರ ಪಾತ್ರೆ ಬಟ್ಟೆಗಳನ್ನಾದರೂ ವಾಪಸ್ಸು ಕೊಡಿ ಎಂದು ಅದಕ್ಕೂ ಸಹ ನಿರಾಕರಿಸಿ ತಹಸೀಲ್ದಾರರು ಬರಬೇಕು, ಅಸಿಸ್ಟೆಂಟ್ ಕಮೀಷನರ್ ಬರಬೇಕು ಎಂದು ನನ್ನನ್ನು ಕಾಯಿಸಿದರು. ಸಾಧಾರಣ ನಾಲ್ಕರಿಂದ ಸುಮಾರು 10.45 ಗಂಟೆಯವರೆಗೆ ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರ್ ಯಾರೂ ಬರಲಿಲ್ಲ. ಇಲ್ಲಿ ಒಂದು ಮಾತನ್ನು ತಮ್ಮಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.